being now finalised and only after the sanction of the estimate, the work will be taken up. But what the hon. Member says is, why this money was allotted here. But only after the estimate is sanctioned, the work will be taken up.

ಶ್ರೀ ವಿ. ಎಲ್, ಶಿವಪ್ಪ.—ಇದು ಒಂದು ವಿಚಿತ್ರವಾದ ಕೆಲಸ. ಯಾವ ಜಾಗದಲ್ಲಿ ಈ ಕೆರೆ ಒಡೆದು ಹೋಯಿತು, ಅಂಥ ಜಾಗದಲ್ಲಿ ಕೋಡಿಯನ್ನು ಮಾಡಿದ್ದಾರೆ. ಒಡ್ಡನ್ನು ಹಾಗೆಯೇ ಬಿಟ್ಟರು. ಅಲ್ಲಿ ಕೆಲಸ ಏನೂ ಮಾಡಬೇಕಾದ್ದು ಇಲ್ಲ. ಸ್ವಲ್ಪ ಮಣ್ಣನ್ನು ಹಾಕಿಸುವ ಕೆಲಸಕ್ಕೆ ಹಿಂದೆಯೇ ಎಷ್ಟಿಮೇಟ್ ಮಾಡಿಸಿದರು. ನಮ್ಮ ಏರಿಯಾ ಕೋಕೊನೆಟ್ ಬೆಳೆಯುವ ಏರಿಯಾ ಆದ್ದರಿಂದ, ಅಲ್ಲಿ ಕೆರೆಯ ನೀರು ಇಂಗಿ ಹೋಗುತ್ತದೆ. ಮೊದಲು ಏನು ೪೧ ಸಾವಿರ ರೂಪಾಯಿಗಳ ಎಷ್ಟಿಮೇಟ್ ಮಾಡಿಸಿದ್ದರು ಅದು ಸರಿಯಾಗಿತ್ತು. ಮೊದಲು ಯಾವ ರೀತಿಯಲ್ಲಿ ಎಷ್ಟಿಮೇಟ್ ಮಾಡಿಸಿದ್ದರು ಅದೇ ರೀತಿಯಲ್ಲಿ ಕೆಲಸ ಪ್ರಾರಂಭಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ನಮ್ಮ ಇಂಜನಿಯರ್‌ಗಳ ಎಷ್ಟಿಮೇಟ್ ಪ್ರಕಾರ ಇದರ ಕೆಲಸ ಮಾಡಬೇಕು ಎಂದು ಇದೆ. ಮಾನ್ಯ ಸದಸ್ಯರು ನಮ್ಮ ಇಂಜನಿಯರುಗಳು ಮಾಡಿದಂಥ ಎಷ್ಟಿಮೇಟನ್ನು ಪುನಃ ಪರಿಶೀಲನೆ ಮಾಡಬೇಕು ಎಂದು ತಿಳಿಸಿದ್ದಾರೆ. ನಾನು ಇಲಾಖೆಯವರಿಗೆ ಮತ್ತೆ ಇದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ತಿಳಿಸುತ್ತೇನೆ,

ಶ್ರೀ ವಿ. ಎಲ್. ಶಿವಪ್ಪ.—ಈ ಟ್ಯಾಂಕ್‌ನ ಕೆಲಸಕ್ಕಾಗಿ, ೭೭–೭೮ರಲ್ಲಿ ೧೦ ಸಾವಿರ ರೂಪಾಯಿ ಗಳನ್ನು, ೭೮–೭೯ರಲ್ಲಿ ೫೦ ಸಾವಿರ ರೂಪಾಯಿಗಳನ್ನೂ ಒಟ್ಟು ೬೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೂ ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ. ತಾವು ಈಗ ಈ ಕೆಲಸವನ್ನು ತರಾತುರಿಯಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಎಷ್ಟಿಮೇಟ್ ಸ್ಯಾಂಕ್ಷನ್ ಆದ ತಕ್ಷಣ ನಾವೂ ಸಹ ತರಾತುರಿ ಯಿಂದ ಕೆಲಸ ಮಾಡಬೇಕು ಎಂದು ಇದ್ದೆವು. ಆದರೆ ಮಾನ್ಯ ಸದಸ್ಯರು ಇದನ್ನು ಪುನ: ಪರಿಶೀಲನೆ ಮಾಡಬೇಕು ಎಂದು ಹೇಳಿದ್ದಾರೆ. ಇದರ ಅಂದಾಜನ್ನು ಮತ್ತೆ ಪರಿಶೀಲನೆಮಾಡಿ, ಕೆಲಸ ಪ್ರಾರಂಭ ಮಾಡುವುದಕ್ಕೆ ಸ್ವಲ್ಪ ತಡವಾಗುತ್ತದೆ ಎನ್ನುವುದನ್ನು ನಾನು ಮಾನ್ಯ ಸದಸ್ಯರಗಮನಕ್ಕೆ ತರಬೇಕಾಗಿದೆ.

Bus Stand at Gorur, Hassan Taluk

834. SRI K. H. HANUME GOWDA (Hassan).—Will the Minister for Transport and Tourism be pleased to state.—

(*a*) the date on which foundation stone for the bus stand at Gorur Village, Kattaya hobli of Hassan taluk was laid and by whom;

(*b*) whethere the plan and estimate of this building has been prepared;

(*c*) the reasons for not starting the work of this building?

SRI R. GUNDU RAO (Minister for Transport and Tourism).—

(*a*) Sri D. Devaraj Urs, the then transport Minister and the present Chief Minister laid the foundation stone for the Bus Stand at Gorur Village on 12th September 1966.

(*b*) No.

(*c*) The construction work of the Bus Stand Building could not be taken up since there was some impendiment regarding ownership of the site fixed for this purpose and the said site has not yet come under the possession of K.S.R.T.C.

ಶ್ರೀ ಕೆ. ಹೆಚ್. ಹನುಮೇಗೌಡ.—ಗೋರೂರು ಬಸ್‌ಸ್ಟಾಂಟ್ ಕಟ್ಟಡದ ಶಂಕು ಸ್ಥಾಪನೆಯನ್ನು ಸುಮಾರು ೧೨ ವರ್ಷಗಳ ಹಿಂದೆಯೇ ಮಾಡಿದರು. ಆದರೂ ಇದಕ್ಕೆ ಪ್ಲಾನ್ ಮತ್ತು ಎಷ್ಟಿಮೇಟನ್ನು ಏಕೆ ತಯಾರು ಮಾಡಿಲ್ಲ?

† ಆರ್. ಗುಂಡುರಾವ್.—ನಾವು ಮೊದಲು ಬಸ್ ಸ್ಟಾಂಡ್‌ನ್ನು ಕಟ್ಟಬೇಕಾದಂಥ ಜಾಗ ಪಂಚಾಯಿತಿಗೆ ಸೇರಿದ್ದು ಎಂದು ತಿಳಿಸಿದ್ದರು. ಆದರೆ ಮೈಸೂರು ಡಿವಿಷನಲ್ ಕಮಿಷನರ್ ಅವರು ಇದು ವಿದ್ಯಾ ಇಲಾಖೆಗೆ ಸೇರಿದ್ದು ಎಂದು ಹೇಳಿದ್ದರು. ಅನಂತರ ವಿದ್ಯಾ ಇಲಾಖೆಯವರನ್ನೂ ನಾವು ಕೇಳಲಾಗಿ. ಇದು ನಮಗೆ ಸೇರಿಲ್ಲ, ಯಾರೋ ಪ್ರೈವೇಟ್ ಪಾರ್ಟಿಯವರಿಗೆ ಸೇರಿದ್ದು ಎಂದು ಉತ್ತರ ಬಂತು. ಹೀಗಾಗಿ ಈ ಜಾಗವನ್ನು ನಾವು ಅಕ್ವೈಯರ್ ಮಾಡಿಕೊಳ್ಳುವುದಕ್ಕೆ ನಿಧಾನವಾಗಿದೆ; ಈ ಜಾಗವನ್ನು ಅಕ್ವೈಯರ್ ಮಾಡಿಕೊಂಡ ತಕ್ಷಣ, ಅಲ್ಲಿ ಬಸ್‌ಸ್ಟಾಂಡ್ ಕಟ್ಟಿಸಿಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ನಾಲ್ಕು ವರ್ಷಗಳ ಹಿಂದೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ, ಆಗಲೂ ಇದಕ್ಕೆ ಇದೇ ಉತ್ತರ ಬಂದಿತ್ತು. ಈ ವರ್ಷವೇ ಈ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಅಂದಿನ ಮಾನ್ಯಮಂತ್ರಿಗಳು ನಮಗೆ ಭರವಸೆಯನ್ನು ಕೊಟ್ಟಿದ್ದರು. ತಾವೂ ಸಹ ಭರವಸೆ ಕೊಡುತ್ತಿದ್ದೀರಿ, ಇದರ ಬಗ್ಗೆ ನಾನು ಈಗ ಯಾವ ತೀರ್ಮಾನಕ್ಕೆ ಬರಬೇಕು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಆರ್. ಗುಂಡುರಾವ್.—ಈ ಜಾಗ ಪ್ರೈವೇಟ್ ಪಾರ್ಟಿಗೆ ಸೇರಿರತಕ್ಕದ್ದು. ಅದನ್ನು ನಮ್ಮ ರಸ್ತೆ ಸಾರಿಗೆ ಇಲಾಖೆಗೆ ಸೇರಿಸಿಕೊಂಡ ತಕ್ಷಣ ಅಲ್ಲಿ ಬಸ್‌ಸ್ಟಾಂಡನ್ನು ಕಟ್ಟಿಸಿಕೊಡುತ್ತೇವೆ. ಇದಕ್ಕೆ ನಮ್ಮ ಬಡ್ಜೆಟ್ಟಿನಲ್ಲಿಯೂ ಸಹ ಪ್ರಾವಿಷನ್ ಮಾಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಮೂರು ವರ್ಷಗಳ ಹಿಂದೆ, ಪಂಚಾಯಿತಿಯ ಅಧ್ಯಕ್ಷರನ್ನು, ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಹೇಮಾವತಿ ಪ್ರಾಜೆಕ್ಟ್‌ಗೆ ಎದುರುಗಡೆ ಜಾಗ ಇದೆ ಅದನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೆ. ಈ ಜಮೀನನ್ನು ನಿಮ್ಮ ಇಲಾಖೆಯವರಿಗೆ ನಾಳೆಯೇ ಬರೆಯಿಸಿಕೊಡುತ್ತೇನೆ, ತಾವು ಕೆಲಸ ಪ್ರಾರಂಭ ಮಾಡುತ್ತೀರಾ?

ಶ್ರೀ ಆರ್. ಗುಂಡುರಾವ್.—ಮಾನ್ಯ ಸದಸ್ಯರು ನಾಳೆಯೇ ಆ ಜಾಗವನ್ನು ನಮಗೆ ಬರೆಯಿಸಿ ಕೊಟ್ಟರೆ, ನಾಡಿದ್ದೇ ನಾವು ಕೆಲಸವನ್ನು ಪ್ರಾರಂಭಮಾಡುತ್ತೇವೆ.

K.E.B. Employees Staff Quarters at Aldur Chickmagalur Taluk

902. Sri C. A. Chandre Gowda (Chickmagalur).—Will the Minister of State for Information and Youth Services be pleased to state.—

(*a*) what are the reasons for stopping the construction of staff quarters for K.E.B. Employees at Aldur in Chickmagalur Taluk since 1966;

(*b*) what is the time required for completing the construction of the said building;

(*c*) will the grievance of the staff there be redressed expeditiously?

Sri K. H. Srinivasa (Minister of State for Information and Youth Services).—

(*a*) The Contractor to whom the work was awarded died when the building was at the foundation level and since then even though several notices are issued, none of his legal heirs have come forward to complete the work.